## 2018 ಕ.ತೀ.ವ 1509

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ

ಭರಮಪ್ಪ ಮೂಕಪ್ಪ ಹೊಸಮನಿ –ವಿರುದ್ಧ– ಕರ್ನಾಟಕ ರಾಜ್ಯ, (ಪ್ರಧಾನ ಕಾರ್ಯದರ್ಶಿಯವರಿಂದ ಪ್ರತಿನಿಧಿತ) ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿ.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ದಿನಾಂಕ: 7ನೇ ಜುಲೈ 2005ರ ಆದೇಶವನ್ನು ಪ್ರಶ್ನಿಸಿ ಮತ್ತು ಅದನ್ನು ರದ್ದುಗೊಳಿಸುವಂತೆ ಕೋರಿ, ಅರ್ಜಿದಾರನು, ರಿಟ್ ಅರ್ಜಿ ಸಂಖ್ಯೆ: 30235ರಲ್ಲಿ ಈ ನ್ಯಾಯಾಲಯವನ್ನು ಕೋರಿದ್ದಾನೆ. 18ನೇ ಜನವರಿ 2005ರ ಆದೇಶದ ಮೂಲಕ ರಿಟ್ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಅರ್ಜಿದಾರನ ವಿರುದ್ಧ ಈ ಪ್ರಶ್ನಿತ ಆದೇಶವನ್ನು ಹೊರಡಿಸಿದಾಗ, ಆತನು ಉಪನ್ಯಾಸಕನಾಗಿ ನೇಮಕ ಹೊಂದಿದ್ದನು.

ಅರ್ಜಿದಾರನು ಅನುಸೂಚಿತ ಜಾತಿಗೆ ಸೇರಿದವನಾಗಿಲ್ಲದಿದ್ದಾಗ್ಯೂ, ತಪ್ಪು ನಿರೂಪಣೆಯ ಮೂಲಕ ಮತ್ತು ಮೋಸದ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಜಾತಿ ಪ್ರಮಾಣಪತ್ರವನ್ನು ಪಡೆದುಕೊಂಡು, ಉಪನ್ಯಾಸಕ ಹುದ್ದೆಯ ನೇಮಕಾತಿಗೆ ಆಯ್ಕೆಯಾಗಲು ಅದನ್ನು ಬಳಕೆ ಮಾಡಿಕೊಂಡಿದ್ದಾನೆ ಎಂಬುದು ಪ್ರತ್ಯರ್ಜಿದಾರರ ಪ್ರಕರಣವಾಗಿದೆ. ಪ್ರಶ್ನಿತ ನೋಟೀಸನ್ನು, ಅರ್ಜಿದಾರನು, ಮೋಸವನ್ನು ಎಸಗಿದ್ದಾನೆಂದು ಆರೋಪಿಸಿ ಹೊರಡಿಸಲಾಗಿದ್ದು, ಆತನು ಅದನ್ನು ಈ ನ್ಯಾಯಾಲಯದ ಮುಂದೆ

*ರಿಟ್ ಅರ್ಜಿ ಸಂಖ್ಯೆ: 109697/2015 (ಎಸ್–ಆರ್), ದಿನಾಂಕ: 16ನೇ ಮಾರ್ಚ್, 2017.

ಪ್ರಶ್ನಿಸಿದ್ದಾನೆ. ಈ ರಿಟ್ ಅರ್ಜಿಯನ್ನು ವಿಲೆ ಮಾಡುವಾಗ, ಈ ನ್ಯಾಯಾಲಯವು ಈ ಮುಂದಿನಂತೆ ಆದೇಶವನ್ನು ಹೊರಡಿಸಿದೆ:

"i) ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ;

ii) ಅರ್ಜಿದಾರನು ಹಿಂದು-ಭೋವಿ ಸಮುದಾಯಕ್ಕೆ ಸೇರಿಲ್ಲವೆಂಬ ಪ್ರಾಧಿಕಾರಗಳ ನಿರ್ಣಯವನ್ನು ಎತ್ತಿಹಿಡಿಯಲಾಗಿದೆ.

iii) ಉಪನ್ಯಾಸಕನಾಗಿ ಮತ್ತು ಈಗ ಯುಜಿಸಿ ವೇತನ ಶ್ರೇಣಿಯನ್ನು ಅನುಭವಿಸುತ್ತಿರುವ ಆಯ್ಕೆ ಶ್ರೇಣಿ ಉಪನ್ಯಾಸಕನಾಗಿ ಅರ್ಜಿದಾರನ ನೇಮಕಾತಿಯನ್ನು ಈ ತೀರ್ಪು ಬಾಧಿಸತಕ್ಕದ್ದಲ್ಲ.

iv) ಅರ್ಜಿದಾರನು, ಅನುಸೂಚಿತ ಜಾತಿಯಾಗಿರುವ ಭೋವಿ ಸಮುದಾಯಕ್ಕೆ ಸೇರಿರುವನೆಂಬ ಕಾರಣದ ಮೇರೆಗೆ, ಭವಿಷ್ಯದ ಯಾವುವೇ ಪ್ರಯೋಜನಗಳಿಗೆ ಅಥವಾ ಯಾವುದೇ ಇತರ ಸಾಂವಿಧಾನಿಕ ಅಥವಾ ಇತರ ಉದ್ದೇಶಕ್ಕೆ ಆತನು ಹಕ್ಕುಳ್ಳವನಾಗಿರತಕ್ಕದ್ದಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ."

ಈ ನ್ಯಾಯಾಲಯದ ಅಭಿಪ್ರಾಯದ ಹಿನ್ನಲೆಯಲ್ಲಿ, ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು, ಇದು ಅಂತಿಮ ಹಂತವನ್ನು ತಲುಪಿದೆಯೆಂದು; ಈಗ, ಮಧ್ಯಂತರ ಅವಧಿಯಲ್ಲಿ, ಅರ್ಜಿದಾರನು ಸೇವೆಯಿಂದ ನಿವೃತ್ತನಾಗಿದ್ದು, ಪಿಂಚಣಿಗೆ ಹಕ್ಕುಳ್ಳವನಾಗಿದ್ದಾನೆಂದು ವಾದಿಸಿದ್ದಾರೆ. ಅಲ್ಲದೆ, ಅರ್ಜಿದಾರನು ಸೇವೆಯಿಂದ ನಿವೃತ್ತನಾದ ನಂತರ, ಭಾರತ ದಂಡ ಸಂಹಿತೆಯ 196, 198, 420ನೇ ಪ್ರಕರಣಗಳ ಹಾಗೂ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989ರ ಅಡಿಯಲ್ಲಿ ಅಪಾದನೆಗಳನ್ನು ಹೊರಿಸಿ, ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಹಾಗೂ ವಿಶೇಷ ನ್ಯಾಯಾಧೀಶರ ಕಡತದಲ್ಲಿ ವಿಶೇಷ (ಎಸ್‌ಸಿ/ಎಸ್‌ಟಿ) ಮೊಕದ್ದಮೆ ಸಂಖ್ಯೆ:

214ರ 16ರಲ್ಲಿ ಅರ್ಜಿದಾರನ ವಿರುದ್ಧ ಮೊಕದ್ದಮೆಯನ್ನು ಪ್ರಾರಂಭಿಸಲಾಗಿದೆ ಎಂದು ವಾದಿಸಿದ್ದಾರೆ. ಅರ್ಜಿದಾರನು ಸದರಿ ಆರೋಪಗಳ ಸಂಬಂಧದಲ್ಲಿ ವಿಚಾರಣೆಗೆ ಒಳಗಾಗಿದ್ದಾನೆ. ಆದಾಗ್ಯೂ, ಈ ಕ್ರಿಮಿನಲ್ ಮೊಕದ್ದಮೆಯು ಖುಲಾಸೆಯಾಗುವುದರೊಂದಿಗೆ ಕೊನೆಗೊಂಡಿದೆ. ಇದರ ಮತ್ತು ಮೇಲೆ ಉಲ್ಲೇಖಿಸಿದ ರಿಟ್ ಅರ್ಜಿಯಲ್ಲಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುವುದರ ಆಧಾರದ ಮೇಲೆ, ಅರ್ಜಿದಾರನು ನಿವೃತ್ತಿ ಸಂಬಂಧಿ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳವನಾಗಿರುವನೆಂದು ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ.

ಸಮಾನ ಪರಿಹಾರವನ್ನು ಮತ್ತು ಸಾಂವಿಧಾನಿಕ ಪರಿಹಾರವನ್ನು ಕೋರುವ ವ್ಯಕ್ತಿಯು, ನಿರ್ಮಲ ಹೃದಯ ಮತ್ತು ಮನಸ್ಸಿನಿಂದ ನ್ಯಾಯಾಲಯವನ್ನು ಎಡತಾಕಬೇಕಾಗುತ್ತದೆ. ವಂಚನೆ ಸಂಬಂಧಿ ಅರ್ಜಿಗಳನ್ನು, ಯಾವುದೇ ವಿಧದ ಪರಿಗಣನೆಗಾಗಿಯೂ ಉಚ್ಚ ನ್ಯಾಯಾಲಯಗಳು ಪುರಸ್ಕರಿಸುವುದಿಲ್ಲ. ಅರ್ಜಿದಾರನು ಲಾಭ ಪಡೆಯುವ ಉದ್ದೇಶದಿಂದ ಅನುಸೂಚಿತ ಜಾತಿಗೆ ಸೇರಿದ್ದನೆಂಬುದು ಮೊಕದ್ದಮೆಯಲ್ಲ. ಆತನು, ಸ್ವತಃ ತಾನು ಅನುಸೂಚಿತ ಜಾತಿಗೆ ಸೇರಿರುವುದಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾನೆ. ಆತನು ಸೇವೆಯಿಂದ ನಿವೃತ್ತನಾಗಿರುವುದರಿಂದ, ಆತನು ಪಿಂಚಣಿ ಪ್ರಯೋಜನಗಳಿಗೆ ಅರ್ಹನೇ ಎಂಬುದು ಮೊಕದ್ದಮೆಯಾಗಿದೆ. ಭಾರತ ಸಂವಿಧಾನದ ಅನುಚ್ಛೇದ 16(4)ರ ಅಡಿಯಲ್ಲಿ ವಿನಾಯಿತಿಯ ಉದ್ದೇಶಕ್ಕೆ ಸಂಬಂಧಿಸಿದಂತೆ, ಪರಿಗಣನೆಗೆ ಹಕ್ಕುಳ್ಳವನಾಗಿರುವ ವ್ಯಕ್ತಿಯ ವಿರುದ್ಧ ಸಾಂವಿಧಾನಿಕ ಉಪಬಂಧಗಳ ಬಗ್ಗೆ ಒಬ್ಬ ವ್ಯಕ್ತಿಯು ಅಪರಾಧವನ್ನು ಎಸಗಿದಾಗ, ಆತನು ಕೋರುತ್ತಿರುವಂಥ ಯಾವುದೇ ಪ್ರಯೋಜನಗಳಿಗಾಗಿ ಹಕ್ಕುಳ್ಳವನಾಗಿರತಕ್ಕದ್ದಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ, ಅರ್ಜಿದಾರನು, ಅರ್ಹ ಅಭ್ಯರ್ಥಿಯೊಬ್ಬನನ್ನು, ಆತನಿಗೆ ದೊರಕಬೇಕಾದ ಅವಕಾಶದಿಂದ ವಂಚಿಸಿ, ತನ್ನ ಇಡೀ ಸೇವೆಯನ್ನು ಸಲ್ಲಿಸಿದ್ದಾನೆ ಮತ್ತು ಸೇವೆಯಿಂದ ನಿವೃತ್ತನಾಗಿದ್ದಾನೆ. ಒಬ್ಬ ವ್ಯಕ್ತಿಯು ಸಂವಿಧಾನದ ಉಪಬಂಧಗಳ ಕುರಿತಂತೆ ಮೋಸ ಎಸಗಿದಾಗ, ಭಾರತ ಸಂವಿಧಾನದ ಅಡಿಯಲ್ಲಿ ಅಸಾಧಾರಣ ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯದಿಂದ ಯಾವುದೇ ಪರಿಹಾರವನ್ನು ಪಡೆಯುವುದಕ್ಕೆ ಆತನು ಹಕ್ಕುಳ್ಳವನಾಗಿರತಕ್ಕದ್ದಲ್ಲ. ನ್ಯಾಯವನ್ನು ಕೋರುವ ವ್ಯಕ್ತಿಯು, ನ್ಯಾಯಯುತವಾಗಿ ನಡೆದುಕೊಳ್ಳಬೇಕು; ಧರ್ಮವನ್ನು ಬಯಸುವ ವ್ಯಕ್ತಿಯು, ಧರ್ಮದಿಂದ ನಡೆದುಕೊಳ್ಳಬೇಕು. ಒಬ್ಬ ವ್ಯಕ್ತಿಯು, ಪ್ರಾಮಾಣಿಕತೆಯಿಂದ

ನ್ಯಾಯಾಲಯವನ್ನು ಸಂಪರ್ಕಿಸದಿದ್ದಾಗ, ಆತನು ಯಾವುದೇ ಪ್ರಯೋಜನವನ್ನು ಕೋರಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

ಆದುದರಿಂದ, ಸದರಿ ವ್ಯಕ್ತಿಯು, ಮೋಸವನ್ನು ಮಾಡಿ ನೇಮಕಾತಿಯ ಪ್ರಯೋಜನವನ್ನು ಪಡೆದಿರುವುದರಿಂದ ಮತ್ತು ತನ್ನ ನೆರವನ್ನು ನೀಡಿ, ಅವಧಿ ವಿಸ್ತರಿಸಿದಷ್ಟರಮಟ್ಟಿಗೆ ಮಾತ್ರ ಆ ನೇಮಕಾತಿಯ ಪ್ರಯೋಜನವನ್ನು ಉಳಿಸಿಕೊಳ್ಳುವಲ್ಲಿ ಆತನಿಗೆ ನ್ಯಾಯಾಲಯವು ಸಹಾಯ ಮಾಡಿರುವುದರಿಂದ, ಕಾನೂನುಬಾಹಿರವಾಗಿ ಪಡೆದ ನೇಮಕಾತಿಯಿಂದ ದೊರಕುವ ಪಿಂಚಣಿಯಂಥ ಹೆಚ್ಚಿನ ಪ್ರಯೋಜನಗಳನ್ನು ಪಡೆಯಲು ಆತನು ಹಕ್ಕುಳ್ಳವನಾಗಿರುವುದಿಲ್ಲ. ವಿಷಯಕ್ಕೆ ಸಂಬಂಧಿಸಿದಂತೆ ಈ ಅಭಿಪ್ರಾಯದ ಹಿನ್ನಲೆಯಲ್ಲಿ, ಈ ಅರ್ಜಿಗೆ ಅನುಮತಿ ನೀಡಲು ನನಗೆ ಯಾವುದೇ ಕಾರಣವು ಕಂಡುಬರುತ್ತಿಲ್ಲ.

ತದನುಸಾರ, ಅರ್ಜಿಯು ವೆಚ್ಚ ಸಹಿತವಾಗಿ ವಜಾಗೊಳ್ಳುತ್ತದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. (2004) 2 ಎಸ್‌ಸಿಸಿ 105* | |
| *ಆರ್ ವಿಶ್ವನಾಥ ಪಿಲ್ಲೈ –ವಿರುದ್ಧ–* | |
| *ಕೇರಳ ರಾಜ್ಯ ಮತ್ತು ಇತರರು* | *(ಉಲ್ಲೇ) 5* |
| *2. ಸ್ಕೇಲ್ 2010 8 237* | |
| *ಮೇಘಮಾಲ –ವಿರುದ್ಧ– ಜಿ ನರಸಿಂಹ ರೆಡ್ಡಿ* | *(ಉಲ್ಲೇ) 6* |

ಅರ್ಜಿದಾರರ ಪರ : ಶ್ರೀ ಬಿ.ಬಿ. ಬಜಂತ್ರಿ ಮತ್ತು ಜಿ.ಕೆ. ಹಿರೇಗೌಡರ್, ನ್ಯಾಯವಾದಿಗಳು;
1 ರಿಂದ 5ರವರೆಗಿನ ಪ್ರತ್ಯರ್ಜಿದಾರರ ಪರ: ಶ್ರೀ ಸಿ. ಜಗದೀಶ್, ವಕೀಲರು,
6ನೇ ಪ್ರತ್ಯರ್ಜಿದಾರರ ಪರ: ಶ್ರೀಮತಿ ಕೆ. ವಿದ್ಯಾವತಿ, ಎಜಿಎ,
7ನೇ ಮತ್ತು 8ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಿದೆ, ಪ್ರತಿನಿಧಿಸಿರುವುದಿಲ್ಲ.

## ಆಜ್ಞೆ

**ನ್ಯಾಯಮೂರ್ತಿ ಎಲ್. ನಾರಾಯಣ ಸ್ವಾಮಿ:**

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ದಿನಾಂಕ: 7ನೇ ಜುಲೈ 2005ರ ಆದೇಶವನ್ನು ಪ್ರಶ್ನಿಸಿ ಮತ್ತು ಅದನ್ನು ರದ್ದುಗೊಳಿಸುವಂತೆ ಕೋರಿ, ಅರ್ಜಿದಾರನು, ರಿಟ್ ಅರ್ಜಿ ಸಂಖ್ಯೆ: 30235ರಲ್ಲಿ ಈ ನ್ಯಾಯಾಲಯವನ್ನು ಕೋರಿದ್ದಾನೆ. 18ನೇ ಜನವರಿ 2005ರ ಆದೇಶದ ಮೂಲಕ ರಿಟ್ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಅರ್ಜಿದಾರನ ವಿರುದ್ಧ ಈ ಪ್ರಶ್ನಿತ ಆದೇಶವನ್ನು ಹೊರಡಿಸಿದಾಗ, ಆತನು ಉಪನ್ಯಾಸಕನಾಗಿ ನೇಮಕ ಹೊಂದಿದ್ದನು.

2. ಅರ್ಜಿದಾರನು ಅನುಸೂಚಿತ ಜಾತಿಗೆ ಸೇರಿದವನಾಗಿಲ್ಲದಿದ್ದಾಗ್ಯೂ, ತಪ್ಪು ನಿರೂಪಣೆಯ ಮೂಲಕ ಮತ್ತು ಮೋಸದ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಜಾತಿ ಪ್ರಮಾಣಪತ್ರವನ್ನು ಪಡೆದುಕೊಂಡು, ಉಪನ್ಯಾಸಕ ಹುದ್ದೆಯ ನೇಮಕಾತಿಗೆ ಆಯ್ಕೆಯಾಗಲು ಅದನ್ನು ಬಳಕೆ ಮಾಡಿಕೊಂಡಿದ್ದಾನೆ ಎಂಬುದು ಪ್ರತ್ಯರ್ಜಿದಾರರ ಪ್ರಕರಣವಾಗಿದೆ. ಪ್ರಶ್ನಿತ ನೋಟೀಸನ್ನು, ಅರ್ಜಿದಾರನು, ಮೋಸವನ್ನು ಎಸಗಿದ್ದಾನೆಂದು ಆರೋಪಿಸಿ ಹೊರಡಿಸಲಾಗಿದ್ದು, ಆತನು ಅದನ್ನು ಈ ನ್ಯಾಯಾಲಯದ ಮುಂದೆ ಪ್ರಶ್ನಿಸಿದ್ದಾನೆ. ಈ ರಿಟ್ ಅರ್ಜಿಯನ್ನು ವಿಲೆ ಮಾಡುವಾಗ, ಈ ನ್ಯಾಯಾಲಯವು ಈ ಮುಂದಿನಂತೆ ಆದೇಶವನ್ನು ಹೊರಡಿಸಿದೆ:

> "i) ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ;
>
> ii) ಅರ್ಜಿದಾರನು ಹಿಂದು–ಭೋವಿ ಸಮುದಾಯಕ್ಕೆ ಸೇರಿಲ್ಲವೆಂಬ ಪ್ರಾಧಿಕಾರಗಳ ನಿರ್ಣಯವನ್ನು ಎತ್ತಿಹಿಡಿಯಲಾಗಿದೆ.

iii) ಉಪನ್ಯಾಸಕನಾಗಿ ಮತ್ತು ಈಗ ಯುಜಿಸಿ ವೇತನ ಶ್ರೇಣಿಯನ್ನು ಅನುಭವಿಸುತ್ತಿರುವ ಆಯ್ಕೆ ಶ್ರೇಣಿ ಉಪನ್ಯಾಸಕನಾಗಿ ಅರ್ಜಿದಾರನ ನೇಮಕಾತಿಯನ್ನು ಈ ತೀರ್ಪು ಬಾಧಿಸತಕ್ಕದ್ದಲ್ಲ.

iv) ಅರ್ಜಿದಾರನು, ಅನುಸೂಚಿತ ಜಾತಿಯಾಗಿರುವ ಭೋವಿ ಸಮುದಾಯಕ್ಕೆ ಸೇರಿರುವನೆಂಬ ಕಾರಣದ ಮೇರೆಗೆ, ಭವಿಷ್ಯದ ಯಾವುವೇ ಪ್ರಯೋಜನಗಳಿಗೆ ಅಥವಾ ಯಾವುದೇ ಇತರ ಸಾಂವಿಧಾನಿಕ ಅಥವಾ ಇತರ ಉದ್ದೇಶಕ್ಕೆ ಆತನು ಹಕ್ಕುಳ್ಳವನಾಗಿರ ತಕ್ಕದ್ದಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ."

3. ಈ ನ್ಯಾಯಾಲಯದ ಅಭಿಪ್ರಾಯದ ಹಿನ್ನಲೆಯಲ್ಲಿ, ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು, ಇದು ಅಂತಿಮ ಹಂತವನ್ನು ತಲುಪಿದೆಯೆಂದು; ಈಗ, ಮಧ್ಯಂತರ ಅವಧಿಯಲ್ಲಿ, ಅರ್ಜಿದಾರನು ಸೇವೆಯಿಂದ ನಿವೃತ್ತನಾಗಿದ್ದು, ಪಿಂಚಣಿಗೆ ಹಕ್ಕುಳ್ಳವನಾಗಿದ್ದಾನೆಂದು ವಾದಿಸಿದ್ದಾರೆ. ಅಲ್ಲದೆ, ಅರ್ಜಿದಾರನು ಸೇವೆಯಿಂದ ನಿವೃತ್ತನಾದ ನಂತರ, ಭಾರತ ದಂಡ ಸಂಹಿತೆಯ 196, 198, 420ನೇ ಪ್ರಕರಣಗಳ ಹಾಗೂ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989ರ ಅಡಿಯಲ್ಲಿ ಅಪಾದನೆಗಳನ್ನು ಹೊರಿಸಿ, ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಹಾಗೂ ವಿಶೇಷ ನ್ಯಾಯಾಧೀಶರ ಕಡತದಲ್ಲಿ ವಿಶೇಷ (ಎಸ್‌ಸಿ/ಎಸ್‌ಟಿ) ಮೊಕದ್ದಮೆ ಸಂಖ್ಯೆ: 214ರ 16ರಲ್ಲಿ ಅರ್ಜಿದಾರನ ವಿರುದ್ಧ ಮೊಕದ್ದಮೆಯನ್ನು ಪ್ರಾರಂಭಿಸಲಾಗಿದೆ ಎಂದು ವಾದಿಸಿದ್ದಾರೆ. ಅರ್ಜಿದಾರನು ಸದರಿ ಆರೋಪಗಳ ಸಂಬಂಧದಲ್ಲಿ ವಿಚಾರಣೆಗೆ ಒಳಗಾಗಿದ್ದಾನೆ. ಆದಾಗ್ಯೂ, ಈ ಕ್ರಿಮಿನಲ್ ಮೊಕದ್ದಮೆಯು ಖುಲಾಸೆಯಾಗುವುದರೊಂದಿಗೆ ಕೊನೆಗೊಂಡಿದೆ. ಇದರ ಮತ್ತು ಮೇಲೆ ಉಲ್ಲೇಖಿಸಿದ ರಿಟ್ ಅರ್ಜಿಯಲ್ಲಿ ಈ ನ್ಯಾಯಾಲಯವು ಅಭಿಪ್ರಾಯಪಟ್ಟಿರುವುದರ ಆಧಾರದ ಮೇಲೆ, ಅರ್ಜಿದಾರನು ನಿವೃತ್ತಿ ಸಂಬಂಧಿ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳವನಾಗಿರುವನೆಂದು ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ.

4. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು. ಮೋಸವನ್ನು ಎಸಗುವ ಮೂಲಕ ಜಾತಿ ಪ್ರಮಾಣಪತ್ರವನ್ನು ಪಡೆದ ಆಧಾರದ ಮೇಲೆ ಅರ್ಜಿದಾರನು ನೇಮಕಾತಿ ಹೊಂದಿದ್ದನೆಂಬುದು ನಿರ್ವಿವಾದಿತ ಸಂಗತಿಯಾಗಿದೆ. ಅನುಸೂಚಿತ ಜಾತಿಯಲ್ಲಿ ಬರುವ ಭೋವಿ ಸಮುದಾಯಕ್ಕೆ ಅರ್ಜಿದಾರನು ಸೇರಿರದವನಾಗಿದ್ದಾಗ್ಯೂ, ಆತನು ಅನುಸೂಚಿತ ಜಾತಿಗೆ ಸೇರಿದವನೆಂಬಂತೆ ಜಾತಿ ಪ್ರಮಾಣಪತ್ರವನ್ನು ಪಡೆದುಕೊಂಡು, ಉಪನ್ಯಾಸಕನಾಗಿ ನೇಮಕಾತಿ ಹೊಂದಿದ್ದಾನೆ ಮತ್ತು ವಯೋನಿವೃತ್ತಿ ತಲುಪಿದ ನಂತರ, ಸೇವೆಯಿಂದ ಸಹ ನಿವೃತ್ತರಾಗಿದ್ದಾನೆ. ಆತನ ಈ ಕಾನೂನುಬಾಹಿರ ಮತ್ತು ಮೋಸದ ಕೃತ್ಯದಿಂದ, ವಾಸ್ತವವಾಗಿ ಅನುಸೂಚಿತ ಜಾತಿಗೆ ಸೇರಿರುವ ಒಬ್ಬ ವ್ಯಕ್ತಿಗೆ ಉಪಬಂಧಿಸಿದಂಥ ಸಂವಿಧಾನದ ಅವಕಾಶದಿಂದಲೇ ಅವನನ್ನು ವಂಚಿತನನ್ನಾಗಿಸಿದ್ದಾನೆ. ಇದಲ್ಲದೆ, ಆತನು ವಯೋನಿವೃತ್ತಿ ತಲುಪುವವರೆಗೆ ಸೇವೆ ಸಲ್ಲಿಸಿದ್ದಾನೆ. ಈಗ, ಆತನು ಪಿಂಚಣಿ ಪ್ರಯೋಜನಗಳನ್ನು ಕೋರುತ್ತಿದ್ದಾನೆ. ಸಮಾನ ಪರಿಹಾರವನ್ನು ಮತ್ತು ಸಾಂವಿಧಾನಿಕ ಪರಿಹಾರವನ್ನು ಕೋರುವ ವ್ಯಕ್ತಿಯು, ನಿರ್ಮಲ ಹೃದಯ ಮತ್ತು ಮನಸ್ಸಿನಿಂದ ನ್ಯಾಯಾಲಯವನ್ನು ಎಡತಾಕಬೇಕಾಗುತ್ತದೆ. ವಂಚನೆ ಸಂಬಂಧಿ ಅರ್ಜಿಗಳನ್ನು, ಯಾವುದೇ ವಿಧದ ಪರಿಗಣನೆಗಾಗಿಯೂ ಉಚ್ಚ ನ್ಯಾಯಾಲಯಗಳು ಪುರಸ್ಕರಿಸುವುದಿಲ್ಲ. ಅರ್ಜಿದಾರನು ಲಾಭ ಪಡೆಯುವ ಉದ್ದೇಶದಿಂದ ಅನುಸೂಚಿತ ಜಾತಿಗೆ ಸೇರಿದ್ದನೆಂಬುದು ಮೊಕದ್ದಮೆಯಲ್ಲ. ಆತನು, ಸ್ವತಃ ತಾನು ಅನುಸೂಚಿತ ಜಾತಿಗೆ ಸೇರಿರುವುದಿಲ್ಲವೆಂಬುದನ್ನು ಒಪ್ಪಿಕೊಂಡಿದ್ದಾನೆ. ಆತನು ಸೇವೆಯಿಂದ ನಿವೃತ್ತನಾಗಿರುವುದರಿಂದ, ಆತನು ಪಿಂಚಣಿ ಪ್ರಯೋಜನಗಳಿಗೆ ಅರ್ಹನೇ ಎಂಬುದು ಮೊಕದ್ದಮೆಯಾಗಿದೆ. ಭಾರತ ಸಂವಿಧಾನದ ಅನುಚ್ಛೇದ 16(4)ರ ಅಡಿಯಲ್ಲಿ ವಿನಾಯಿತಿಯ ಉದ್ದೇಶಕ್ಕೆ ಸಂಬಂಧಿಸಿದಂತೆ, ಪರಿಗಣನೆಗೆ ಹಕ್ಕುಳ್ಳವನಾಗಿರುವ ವ್ಯಕ್ತಿಯ ವಿರುದ್ಧ ಸಾಂವಿಧಾನಿಕ ಉಪಬಂಧಗಳ ಬಗ್ಗೆ ಒಬ್ಬ ವ್ಯಕ್ತಿಯು ಅಪರಾಧವನ್ನು ಎಸಗಿದಾಗ, ಆತನು ಕೋರುತ್ತಿರುವಂಥ ಯಾವುದೇ ಪ್ರಯೋಜನಗಳಿಗಾಗಿ ಹಕ್ಕುಳ್ಳವನಾಗಿರತಕ್ಕದ್ದಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಪ್ರಸ್ತುತ ಮೊಕದ್ದಮೆಯಲ್ಲಿ, ಅರ್ಜಿದಾರನು, ಅರ್ಹ ಅಭ್ಯರ್ಥಿಯೊಬ್ಬನನ್ನು, ಆತನಿಗೆ ದೊರಕಬೇಕಾದ ಅವಕಾಶದಿಂದ ವಂಚಿಸಿ, ತನ್ನ ಇಡೀ ಸೇವೆಯನ್ನು ಸಲ್ಲಿಸಿದ್ದಾನೆ

ಮತ್ತು ಸೇವೆಯಿಂದ ನಿವೃತ್ತನಾಗಿದ್ದಾನೆ. ಒಬ್ಬ ವ್ಯಕ್ತಿಯು ಸಂವಿಧಾನದ ಉಪಬಂಧಗಳ ಕುರಿತಂತೆ ಮೋಸ ಎಸಗಿದಾಗ, ಭಾರತ ಸಂವಿಧಾನದ ಅಡಿಯಲ್ಲಿ ಅಸಾಧಾರಣ ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯದಿಂದ ಯಾವುದೇ ಪರಿಹಾರವನ್ನು ಪಡೆಯುವುದಕ್ಕೆ ಆತನು ಹಕ್ಕುಳ್ಳವನಾಗಿರತಕ್ಕದ್ದಲ್ಲ. ನ್ಯಾಯವನ್ನು ಕೋರುವ ವ್ಯಕ್ತಿಯು, ನ್ಯಾಯಯುತವಾಗಿ ನಡೆದುಕೊಳ್ಳಬೇಕು; ಧರ್ಮವನ್ನು ಬಯಸುವ ವ್ಯಕ್ತಿಯು, ಧರ್ಮದಿಂದ ನಡೆದುಕೊಳ್ಳಬೇಕು. ಒಬ್ಬ ವ್ಯಕ್ತಿಯು, ಪ್ರಾಮಾಣಿಕತೆಯಿಂದ ನ್ಯಾಯಾಲಯವನ್ನು ಸಂಪರ್ಕಿಸದಿದ್ದಾಗ, ಆತನು ಯಾವುದೇ ಪ್ರಯೋಜನವನ್ನು ಕೋರಲು ಹಕ್ಕುಳ್ಳವನಾಗಿರತಕ್ಕದ್ದಲ್ಲ. ಈ ಮೊದಲು, ಈ ನ್ಯಾಯಾಲಯದ ಆದೇಶದ ಮೂಲಕ, ಅರ್ಜಿದಾರನನ್ನು ಭೋವಿ ಜನಾಂಗಕ್ಕೆ ಸೇರದವನಾಗಿದ್ದರೆ ಹೇಗೋ ಹಾಗೆ ಪರಿಗಣಿಸಬೇಕೆಂದು, ಅಲ್ಲದೆ ಆತನು ಯಾವುದೇ ಹೆಚ್ಚಿನ ಪ್ರಯೋಜನಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲವೆಂದು ನಿರ್ದೇಶಿಸಲಾಗಿತ್ತು. ಆ ಅಭಿಪ್ರಾಯವು ವಾಸ್ತವವಾಗಿ ಪರಿಹಾರ ನೀಡುತ್ತದೆ. ಸಂವಿಧಾನ ಹಾಗೂ ಮೀಸಲಾತಿ ಉದ್ದೇಶವು ಅನೇಕ ವರ್ಷಗಳಿಂದ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದಮನಕ್ಕೊಳಗಾದ ಸಮುದಾಯಗಳಿಗೆ ವಿಶೇಷ ಹಕ್ಕುಗಳನ್ನು ನೀಡುವ ಉದ್ದೇಶವನ್ನು ಒಳಗೊಂಡಿದೆಯಲ್ಲವೆ.

5. ಈ ಸಂಬಂಧದಲ್ಲಿ, ವರದಿ ಮಾಡಿದ, ***ಆರ್. ವಿಶ್ವನಾಥ ಪಿಳ್ಳೈ –ವಿರುದ್ಧ– ಕೇರಳ ರಾಜ್ಯ ಮತ್ತು ಇತರರು***[1] ಮೊಕದ್ದಮೆಯಲ್ಲಿನ ತೀರ್ಪಿನ 26ರಿಂದ 29ನೇ ಕಂಡಿಕೆಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವುದನ್ನು ಉಲ್ಲೇಖಿಸುವುದು ಉಪಯುಕ್ತವಾಗಿದೆ. ಅದು ಈ ಕೆಳಗಿನಂತಿದೆ:

> "26. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ನಾವು ಆಲಿಸಿದ್ದೇವೆ. ಕುಮಾರಿ ಮಾಧುರಿ ಪಾಟೀಲ್ ಮೊಕದ್ದಮೆಯಲ್ಲಿ (ಮೇಲೆ ಹೇಳಿದ), ಅಭ್ಯರ್ಥಿಯು ಮೋಸದಿಂದ

2 (2004) 2 ಎಸ್‌ಸಿಸಿ 015

ಪಡೆದುಕೊಂಡ ಸಾಮಾಜಿಕ ಸ್ಥಾನಮಾನದ ರದ್ದತಿಯನ್ನು ಎತ್ತಿಹಿಡಿಯುವಾಗ, ನ್ಯಾಯಾಲಯವು, ಆಕೆಯು ಪಡೆದುಕೊಂಡ ಸಾಮಾಜಿಕ ಜಾತಿ ಪ್ರಮಾಣಪತ್ರದ ಆಧಾರದ ಮೇಲೆ, ಭವಿಷ್ಯದಲ್ಲಿ ಯಾವುದೇ ಪ್ರಯೋಜನವನ್ನು ಪಡೆಯಲು ಆಕೆಯು ಹಕ್ಕುಳ್ಳವಳಾಗಿರತಕ್ಕದ್ದಲ್ಲ ಎಂಬ ಷರತ್ತಿನೊಂದಿಗೆ ಎಮ್.ಬಿ.ಬಿ.ಎಸ್. ಕೋರ್ಸ್‌ನ ಅಂತಿಮ ವರ್ಷದ ಪರೀಕ್ಷೆಗೆ ಹಾಜರಾಗಲು ಆಕೆಗೆ ಅನುಮತಿ ನೀಡಲಾಗಿತ್ತು. ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"18. ಪ್ರಕ್ರಿಯೆಯಲ್ಲಿನ ವಿಳಂಬವು ಅನಿವಾರ್ಯವಾದುದಾಗಿದೆ, ಆದರೂ, ಸಂಗತಿಯನ್ನು ಸುಸಂಗತವೆಂದು ಪರಿಗಣಿಸಲಾಗುವುದಿಲ್ಲ ಅಥವಾ ಅಧ್ಯಯನದ ಕೋರ್ಸ್‌ನ್ನು ಪೂರ್ಣಗೊಳಿಸಲು ಸಹಾಯಕವೂ ಆಗುವುದಿಲ್ಲ. ಆದರೆ, ಅಂತಿಮ ಪರೀಕ್ಷೆಗೆ ಹಾಜರಾಗುವುದನ್ನು ಹೊರತುಪಡಿಸಿ, ಆಕೆಯು ಇಡೀ ಕೋರ್ಸನ್ನು ಪೂರ್ಣಗೊಳಿಸಿದ್ದಾಳೆ ಎಂಬ ಸಂಗತಿಯಿಂದಾಗಿ, ಅಧ್ಯಯನ ನಡೆಸುವುದನ್ನು ಮತ್ತು ಪರೀಕ್ಷೆಗೆ ಹಾಜರಾಗುವುದನ್ನು ಪ್ರಾಸಿಕ್ಯೂಟ್ ಮಾಡುವುದರಿಂದ ಆಕೆಯನ್ನು ನಿರ್ಬಂಧಿಸಲು, ನಾವು ನಿರ್ದೇಶಿತರಾಗುತ್ತೇವೆ. ಈ ವಾಸ್ತವಿಕ ಸನ್ನಿವೇಶದಲ್ಲಿ, ಅಂತಿಮ ವರ್ಷದ ಎಮ್.ಬಿ.ಬಿ.ಎಸ್. ಪರೀಕ್ಷೆಗೆ ಹಾಜರಾಗುವುದರಿಂದ ಆಕೆಯನ್ನು ನಿರ್ಬಂಧಿಸುವುದರಿಂದ ಯಾವುದೇ ಉಪಯುಕ್ತ ಉದ್ದೇಶವನ್ನು ನಾವು ಸಾಧಿಸಿದಂತಾಗುವುದಿಲ್ಲ. ಆದುದರಿಂದ, ಮಹಾದೇವ ಕೋಲಿ ಆಗಿ, ಕು. ಸುಚಿತಾ ಲಕ್ಷ್ಮಣ ಪಾಟೀಲ್ ಇವರು ಮೋಸದಿಂದ ಪಡೆದುಕೊಂಡ ಸಾಮಾಜಿಕ ಸ್ಥಾನಮಾನವನ್ನು

ರದ್ದುಗೊಳಿಸಿರುವುದನ್ನು ನಾವು ಎತ್ತಿ ಹಿಡಿಯುತ್ತೇವೆ, ಆದರೂ, ಎಮ್.ಬಿ.ಬಿ.ಎಸ್. ಕೋರ್ಸ್‌ನ ಅಂತಿಮ ವರ್ಷದ ಪರೀಕ್ಷೆಗೆ ಹಾಜರಾಗಲು ಆಕೆಗೆ ಅನುಮತಿ ನೀಡುತ್ತೇವೆ. ಆದಾಗ್ಯೂ, ಮಹಾದೇವ ಕೋಲಿ ಆಗಿ ಮೋಸದ ಸಾಮಾಜಿಕ ಸ್ಥಾನಮಾನದ ಆಧಾರದ ಮೇಲೆ ಭವಿಷ್ಯದಲ್ಲಿ ಯಾವುದೇ ಪ್ರಯೋಜನಗಳನ್ನು ಪಡೆಯಲು ಆಕೆಯು ಹಕ್ಕುಳ್ಳವಳಾಗಿರುವುದಿಲ್ಲ. ಆದಾಗ್ಯೂ, ಈ ನಿರ್ದೇಶನವು ಸಂವಿಧಾನದ ಧ್ಯೇಯಗಳನ್ನು ವಿಫಲಗೊಳಿಸುವುದರಿಂದ, ಭವಿಷ್ಯದಲ್ಲಿ ಇಂಥಹುವೇ ಮೊಕದ್ದಮೆಗಳಲ್ಲಿ ಇದನ್ನು ಪೂರ್ವನಿದರ್ಶನವಾಗಿ ಪರಿಗಣಿಸಬಾರದು ಮತ್ತು ಬಳಸಬಾರದು."

[ಒತ್ತು ನೀಡಲಾಗಿದೆ]

27. ***ಮಹಾರಾಷ್ಟ್ರ ರಾಜ್ಯ –ವಿರುದ್ಧ– ಮಿಲಿಂದ್ ಮತ್ತು ಇತರರು*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ಸಂವಿಧಾನ ಪೀಠವು, ಅನುಸೂಚಿತ ಪಂಗಡದ ಸದಸ್ಯನಾಗಿ ಅಭ್ಯರ್ಥಿಯ ಕ್ಲೇಮನ್ನು ತಿರಸ್ಕರಿಸಿದರೂ, ಆತನು ಪಡೆದುಕೊಂಡ ಪದವಿಯನ್ನು ಉಳಿಸಿಕೊಳ್ಳಲು ಆತನಿಗೆ ಅನುಮತಿ ನೀಡುವಾಗ, ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"38. ಪ್ರತ್ಯರ್ಜಿದಾರ–1 ಈತನು, 1985–86ನೇ ಸಾಲಿನಲ್ಲಿ ವೈದ್ಯಕೀಯ ಕೋರ್ಸಿಗೆ ಸೇರಿದ್ದಾನೆ. ಈಗ, ಸುಮಾರು 15 ವರ್ಷಗಳನ್ನು ಕಳೆದಿದ್ದಾನೆ. ಆತನು ಈಗಾಗಲೇ ಕೋರ್ಸನ್ನು ಪೂರ್ಣಗೊಳಿಸಿ, ವೈದ್ಯನಾಗಿ ವೃತ್ತಿ ನಡೆಸುತ್ತಿರಬಹುದೆಂದು ನಮಗೆ ಹೇಳಲಾಗಿದೆ. ಈ ದೃಷ್ಟಿಯಿಂದ ಮತ್ತು ಈ ದೀರ್ಘಾವಧಿಯನ್ನು

ಗಮನಕ್ಕೆ ತೆಗೆದುಕೊಂಡಲ್ಲಿ, ಆತನ ಪ್ರವೇಶವನ್ನು ನಿಷ್ಪರಿಣಾಮಗೊಳಿಸುವುದರಿಂದ ಯಾರಿಗೂ ಪ್ರಯೋಜನವಿಲ್ಲ. ವೈದ್ಯಕೀಯ ಕೋರ್ಸನ್ನು ಸೇರಿ ಅದನ್ನು ಪೂರ್ಣಗೊಳಿಸಲು ಪ್ರತಿಯೊಬ್ಬ ಅಭ್ಯರ್ಥಿಯ ಮೇಲೆ ಭಾರೀ ಮೊತ್ತದ ಹಣವನ್ನು ವೆಚ್ಚ ಮಾಡಲಾಗಿರುತ್ತದೆ. ಪ್ರತ್ಯರ್ಜಿದಾರ–1 ಈತನಿಗೆ ಪ್ರವೇಶ ನೀಡುವ ಮೂಲಕ ವೈದ್ಯಕೀಯ ಕೋರ್ಸನ್ನು ಆತನು ಸೇರುವುದರಿಂದ ಅನುಸೂಚಿತ ಪಂಗಡದ ಒಬ್ಬ ಅಭ್ಯರ್ಥಿಯನ್ನು ವಂಚಿತಗೊಳಿಸಲಾಗಿದೆ ಎಂಬ ಬಗ್ಗೆ ಯಾವುದೇ ಸಂಶಯವಿಲ್ಲ. ಪ್ರತ್ಯರ್ಜಿದಾರ–1 ಈತನ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡರೆ, ಈಗಾಗಲೇ ಸಾರ್ವಜನಿಕರ ಹಣವನ್ನು ಯಾವ ವೈದ್ಯನ ಮೇಲೆ ವೆಚ್ಚ ಮಾಡಲಾಗಿದೆಯೋ, ಆ ವೈದ್ಯನನ್ನು ಸಮಾಜಕ್ಕೆ ಸೇವೆ ಸಲ್ಲಿಸುವುದರಿಂದ ವಂಚಿತಗೊಳಿಸುವುದಕ್ಕೆ ದಾರಿಯಾಗುತ್ತದೆ. ಈ ಸಂದರ್ಭಗಳ ಹಿನ್ನಲೆಯಲ್ಲಿ, ಆತನು ಪಡೆದುಕೊಂಡ ಪದವಿಯನ್ನು ಮತ್ತು ವೈದ್ಯನಾಗಿ ಆತನು ವೃತ್ತಿ ನಡೆಸುತ್ತಿರುವುದರ ಮೇಲೆ ಯಾವುದೇ ರೀತಿಯಲ್ಲೂ ಪರಿಣಾಮ ಬೀರುವುದಿಲ್ಲ. ಆದರೆ, ಅನುಸೂಚಿತ ಪಂಗಡಗಳ ಆದೇಶದ ಮೂಲಕ ಅನುಸೂಚಿತ ಪಂಗಡಕ್ಕೆ ಸೇರಲು ಆತನು ಕ್ಲೇಮು ಮಾಡುವಂತಿಲ್ಲ ಎಂಬುದನ್ನು ನಾವು ಸ್ಪಷ್ಟಪಡಿಸುತ್ತೇವೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಇನ್ನು ಮುಂದೆ ಅಥವಾ ಯಾವುದೇ ಇತರ ಸಾಂವಿಧಾನಿಕ ಉದ್ದೇಶಕ್ಕೆ, ಅನುಸೂಚಿತ ಪಂಗಡಗಳ ಆದೇಶದ ಪ್ರಯೋಜನವನ್ನು ಆತನು ಪಡೆದುಕೊಳ್ಳುವಂತಿಲ್ಲ. ದೀರ್ಘ ಸಮಯವನ್ನು ಕ್ರಮಿಸಿರುವುದನ್ನು ಗಮನಕ್ಕೆ ತೆಗೆದುಕೊಂಡು, 1985ರ

> ಎಸ್‌ಎಲ್‌ಪಿ (ಸಿ) ಸಂಖ್ಯೆ: 16372ರಲ್ಲಿ ಈ ನ್ಯಾಯಾಲಯವು ಹೊರಡಿಸಿದ ಮಧ್ಯಂತರ ಆದೇಶಗಳು ಮತ್ತು ಇತರ ಸಂಬಂಧಪಟ್ಟ ವ್ಯವಹರಣೆಗಳನ್ನು ಒಳಗೊಂಡಂತೆ, ಪ್ರಸ್ತುತ ಸಂದರ್ಭಗಳಲ್ಲಿ, ಅಂತಿಮಗೊಂಡಿರುವ ಪ್ರವೇಶ ನೀಡಿಕೆ ಮತ್ತು ನೇಮಕಾತಿಗಳು ಈ ತೀರ್ಪಿನ ಮೂಲಕ ಪರಿಣಾಮಕಾರಿಯಾಗದೆ ಉಳಿಯತಕ್ಕದ್ದು ಎಂಬುದನ್ನು ನಾವು ಸ್ಪಷ್ಟಪಡಿಸುತ್ತೇವೆ."
>
> [ಒತ್ತು ನೀಡಲಾಗಿದೆ]

28. ಈ ಮೊಕದ್ದಮೆಯಲ್ಲಿ ನಾವು, 1992ನೇ ಸಾಲಿನಲ್ಲಿ ಅರ್ಜಿದಾರನು ರೀಜನಲ್ ಇಂಜಿನಿಯರಿಂಗ್ ಕಾಲೇಜ್‌ಗೆ ಪ್ರವೇಶ ಪಡೆದುಕೊಂಡಿದ್ದಾನೆ. ರಿಟ್ ಅರ್ಜಿಯ ಸಂಬಂಧದಲ್ಲಿ ಅಂತಿಮ ಆದೇಶವನ್ನು ಹೊರಡಿಸುವುದಕ್ಕೆ ಒಳಪಟ್ಟು, ಈ ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ 1996ರಲ್ಲಿ ಆತನು ತನ್ನ ಅಧ್ಯಯನದ ಕೋರ್ಸ್‌ನ್ನು ಪೂರ್ಣಗೊಳಿಸಿದ್ದಾನೆ. ಆತನು ಈಗಾಗಲೇ ತೆಗೆದುಕೊಂಡ ಪರೀಕ್ಷೆಯ ಆಧಾರದ ಮೇಲೆ ಫಲಿತಾಂಶ ಘೋಷಣೆಯನ್ನು ತಡೆಹಿಡಿಯುವುದರಿಂದ ಅಥವಾ ಆತನು ಪರೀಕ್ಷೆಯಲ್ಲಿ ತೇರ್ಗಡೆಯಾದ ಸಂದರ್ಭದಲ್ಲಿ ಆತನು ಪಡೆದುಕೊಳ್ಳುವ ಪದವಿಯಿಂದ ಆತನನ್ನು ವಂಚಿತಗೊಳಿಸುವಲ್ಲಿ ಯಾವುದೇ ಉದ್ದೇಶವನ್ನು ಸಾಧಿಸಿದಂತಾಗುವುದಿಲ್ಲ. ಮಹಾರಾಷ್ಟ್ರ ರಾಜ್ಯ –ವಿರುದ್ಧ– ಮಿಲಿಂದ್ ಮತ್ತು ಇತರರು (ಮೇಲೆ ಉಲ್ಲೇಖಿಸಿದ) ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ಸಾಂವಿಧಾನಿಕ ಪೀಠವು ಹೊರಡಿಸಿದ ಆದೇಶಗಳನ್ನು ಗಮನದಲ್ಲಿರಿಸಿಕೊಂಡು, ಆತನ ಪರೀಕ್ಷಾ ಫಲಿತಾಂಶವನ್ನು ಘೋಷಿಸಬೇಕೆಂದು ಮತ್ತು ಸೇವೆಯನ್ನು ಪಡೆಯುವಲ್ಲಾಗಲಿ

> ಅಥವಾ ಆತನು ಪಡೆದುಕೊಂಡ ಜಾತಿ ಪ್ರಮಾಣಪತ್ರದಿಂದ ಒದಗಿಬರುವ ಯಾವುವೇ ಇತರ ಪ್ರಯೋಜನಗಳಿಗಾಗಲಿ ಭವಿಷ್ಯದಲ್ಲಿ ಆತನನ್ನು ಅನುಸೂಚಿತ ಜಾತಿಯ ಅಭ್ಯರ್ಥಿ ಎಂಬುದಾಗಿ ಪರಿಗಣಿಸುವಂತಿಲ್ಲ ಎಂಬ ಷರತ್ತಿನೊಂದಿಗೆ ಪದವಿ ಪಡೆದುಕೊಳ್ಳಲು ಆತನಿಗೆ ಅನುಮತಿ ನೀಡಬೇಕೆಂದು ನಾವು ನಿರ್ದೇಶಿಸುತ್ತೇವೆ. ಆತನು ಪಡೆದುಕೊಂಡು ಜಾತಿ ಪ್ರಮಾಣಪತ್ರವನ್ನು ರದ್ದುಗೊಳಿಸಬೇಕೆಂದು ಆದೇಶಿಸಲಾಗಿದೆ. ಆದುದರಿಂದ, ಎಲ್ಲಾ ಉದ್ದೇಶಗಳಿಗಾಗಿ, ಸಾಮಾನ್ಯ ಪ್ರವರ್ಗಕ್ಕೆ ಸೇರಿರುವ ವ್ಯಕ್ತಿಯೆಂದು ಆತನನ್ನು ಪರಿಗಣಿಸುವುದು.
>
> 29. ಮೇಲೆ ಹೇಳಿದ ಕಾರಣಗಳಿಗಾಗಿ, ಅರ್ಜಿಗೆ ಅವಕಾಶ ನೀಡಿ, ಕೇರಳ ಉಚ್ಚ ನ್ಯಾಯಾಲಯವು ಹೊರಡಿಸಿರುವ ದಿನಾಂಕ: 15.3.2002ರ ಪ್ರಶ್ನಿತ ಆದೇಶವನ್ನು ತಳ್ಳಿ ಹಾಕಲಾಗಿದೆ."

6. ***ಮೇಘಮಾಲ –ವಿರುದ್ಧ– ಜಿ. ನರಸಿಂಹ ರೆಡ್ಡಿ*** [2], ಮೊಕದ್ದಮೆಯ ತೀರ್ಪಿನ 10ನೇ ಮತ್ತು 11ನೇ ಕಂಡಿಕೆಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುವುದು ಸಹ ಪ್ರಯೋಜನಕಾರಿಯಾಗಿದೆ. ಸದರಿ ತೀರ್ಪಿನ 10ನೇ ಮತ್ತು 11ನೇ ಕಂಡಿಕೆಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

> "10. ಒಬ್ಬ ಅರ್ಜಿದಾರನು, ತಪ್ಪು ನಿರೂಪಣೆಯಿಂದ ಅಥವಾ ಮೋಸ ಎಸಗುವ ಮೂಲಕ ಸಕ್ಷಮ ಪ್ರಾಧಿಕಾರದಿಂದ ಆದೇಶವನ್ನು/ ಹುದ್ದೆಯನ್ನು ಪಡೆದುಕೊಂಡಲ್ಲಿ, ಅಂಥ ಆದೇಶವು ಕಾನೂನಿನ ದೃಷ್ಟಿಯಲ್ಲಿ ಊರ್ಜಿತವಾಗುವುದಿಲ್ಲ ಎಂಬುದು ಕಾನೂನಿನ ನಿರ್ಧರಿತ ಪ್ರಸ್ತಾವವಾಗಿದೆ. "ಎಲ್ಲಾ ಪಾರಮಾರ್ಥಿಕ ಅಥವಾ ಐಹಿಕವಾದ

2. ಸ್ಕೇಲ್ 2010 8 237

ನ್ಯಾಯಿಕ ಕೃತ್ಯಗಳನ್ನು ಮೋಸವು ಇಲ್ಲವಾಗಿಸುತ್ತದೆ. [ನೋಡಿ: ಎಸ್.ಪಿ. ಚೆಂಗಲವರಯ ನಾಯ್ಡು (ಮೃತ) ಇವರ ಕಾನೂನು ಪ್ರತಿನಿಧಿಗಳು –ವಿರುದ್ಧ– ಜಗನ್ನಾಥ್ (ಮೃತ) ಇವರ ಕಾನೂನು ಪ್ರತಿನಿಧಿಗಳು ಮತ್ತು ಇತರರು, ಎಐಆರ್ 1994 ಎಸ್‌ಸಿ 853]. ಲಾಜರಸ್ ಎಸ್ಟೇಟ್ ಲಿಮಿಟೆಡ್ –ವಿರುದ್ಧ– ಬೆಸಲೆ, 1956 ಎಎಲ್ಎಲ್. ಇ.ಆರ್. 349) ಮೊಕದ್ದಮೆಯಲ್ಲಿ, ಅಸ್ಪಷ್ಟತೆಗೆ ಆಸ್ಪದವಿಲ್ಲದಂತೆ ನ್ಯಾಯಾಲಯವು, "ನ್ಯಾಯಾಲಯದ ಯಾವುದೇ ತೀರ್ಪು, ಸಚಿವರ ಯಾವುದೇ ಆದೇಶವು, ಮೋಸದಿಂದ ಅದನ್ನು ಪಡೆದುಕೊಂಡಿದ್ದರೆ, ಮೋಸವು ಎಲ್ಲವನ್ನೂ ಬಹಿರಂಗಪಡಿಸಿದ್ದಕ್ಕಾಗಿ, ಅದನ್ನು ಬೆಂಬಲಿಸಲು ಅವಕಾಶ ನೀಡಲಾಗುವುದಿಲ್ಲ" ಎಂದು ಅಭಿಪ್ರಾಯಪಟ್ಟಿದೆ.

ಆಂಧ್ರಪ್ರದೇಶ ರಾಜ್ಯ ಹಣಕಾಸು ನಿಗಮ –ವಿರುದ್ಧ– ಮೆ: ಜಿಎಆರ್ ರಿ–ರೋರಿಂಗ್ ಮಿಲ್ಸ್ & ಮತ್ತೊಬ್ಬರು, ಎಐಆರ್ 1994 ಎಸ್‌ಸಿ 2151 ಮತ್ತು ಮಹಾರಾಷ್ಟ್ರ ರಾಜ್ಯ ಮತ್ತು ಇತರರು –ವಿರುದ್ಧ– ಪ್ರಭು, (1994) 2 ಎಸ್‌ಸಿಸಿ 481 ಈ ಮೊಕದ್ದಮೆಗಳಲ್ಲಿ, ನ್ಯಾಯಾಲಯಗಳು ಸದುದ್ದೇಶವನ್ನು ಪ್ರೇರೇಪಿಸುವ ಮೂಲಕ ನ್ಯಾಯ ನಿರ್ಣಯಿಸಲು ಬದ್ಧವಾಗಿರುವುದರಿಂದ, ಅವುಗಳ ನ್ಯಾಯಿಕ ವ್ಯಾಪ್ತಿಯ ಅಧಿಕಾರವನ್ನು ಚಲಾಯಿಸುವಾಗ, ಕಾನೂನಿನ ಮೋಸದ ಅಪಕೃತ್ಯವನ್ನು ತಡೆಯಲು ಕಾರ್ಯನಿರ್ವಹಿಸಬೇಕಾಗುತ್ತದೆ. "ನ್ಯಾಯಪರತೆಯನ್ನು, ಕಾನೂನಿಂದ ತಪ್ಪಿಸಿಕೊಳ್ಳಲು ಕಂಡುಕೊಂಡ ಕುಟಿಲ ಮಾರ್ಗಗಳಿಂದ ಮತ್ತು ಕುಯುಕ್ತಿಗಳಿಂದ ಕಾನೂನನ್ನು ತಡೆಯುವುದಕ್ಕೆ ಸಹ ಗುರುತಿಸಲಾಗಿದೆ."

ಶ್ರೀಮತಿ ಶ್ರೀಶ್ತಿ ಧವನ್ –ವಿರುದ್ಧ– ಮೆ/ ಷಾ ಸಹೋದರರು, ಎಐಆರ್ 1992 ಎಸ್‌ಸಿ 1555 ಮೊಕದ್ದಮೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ:

"ಮೋಸ ಮತ್ತು ಸಂಚು ಇವು, ನ್ಯಾಯಕ್ಕೆ ಸಂಬಂಧಿಸಿದ ಯಾವುದೇ ನಾಗರಿಕ ವ್ಯವಸ್ಥೆಯಲ್ಲಿನ ಅತ್ಯಂತ ವಿಧಿವಿಹಿತ ವ್ಯವಹರಣೆಗಳನ್ನು ಸಹ ದೋಷಯುಕ್ತವನ್ನಾಗಿಸುತ್ತದೆ. ಇದು, ಮಾನವ ನಡತೆಯ ವಿವರಣಾತ್ಮಕ ಪರಿಕಲ್ಪನೆಯಾಗಿದೆ."

11. ಯುನೈಟೆಡ್ ಇಂಡಿಯಾ ಇನ್ಸುರನ್ಸ್ ಕಂಪನಿ ನಿಯಮಿತ –ವಿರುದ್ಧ– ರಾಜೇಂದ್ರ ಸಿಂಗ್ ಮತ್ತು ಇತರರು, ಎಐಆರ್ 200 ಎಸ್‌ಸಿ 1165 ಈ ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, "ಮೋಸ ಮತ್ತು ನ್ಯಾಯ ಒಂದೇ ಕಡೆ ಇರಲು ಎಂದಿಗೂ ಸಾಧ್ಯವಿಲ್ಲ" (fraus et jus nunquam cohabitant) ಎಂದು ಅಭಿಪ್ರಾಯಪಟ್ಟಿದೆ ಮತ್ತು ಶತಮಾನಗಳಿಂದಲೂ ತನ್ನ ಲಯವನ್ನು ಎಂದಿಗೂ ಕಳೆದುಕೊಳ್ಳದಿರುವ ಮೂಲ ಸೂಕ್ತಿಯಾಗಿದೆ (pristine maxim).

ವಿವಿಧ ಮೊಕದ್ದಮೆಗಳಲ್ಲಿ ಈ ನ್ಯಾಯಾಲಯವು ಹೇಳಿದ ಉಕ್ತಿ ಎಂದರೆ: ಮೋಸ ಮಾಡಿದ ಅಥವಾ ತಪ್ಪಾಗಿ ನಿರೂಪಿಸಿದ ವ್ಯಕ್ತಿಗಳಿಗೆ ಫಲ ಮತ್ತು ಪ್ರಯೋಜನವನ್ನು ಪಡೆಯುವ ಅಪ್ರಾಮಣಿಕತೆಗೆ ಅನುಮತಿ ನೀಡಬಾರದು ಹಾಗೂ ಅಂಥ ಸಂದರ್ಭಗಳಲ್ಲಿ, ನ್ಯಾಯಾಲಯುವು, ಮೋಸವನ್ನು ಶಾಶ್ವತಗೊಳಿಸಬಾರದು. [ನೋಡಿ: ಜಿಲ್ಲಾಧಿಕಾರಿ & ಅಧ್ಯಕ್ಷ, ವಿಜಯನಗರಂ ಸಾಮಾಜಿಕ ಕ್ಷೇಮಾಭಿವೃದ್ಧಿ ವಸತಿ ಶಾಲೆ ಸಂಘ, ವಿಜಯನಗರಂ ಮತ್ತು ಇತರರು –ವಿರುದ್ಧ– ಎಮ್. ತ್ರಿಪುರ ಸುಂದರಿ ದೇವಿ; (1990) 3 ಎಸ್‌ಸಿಸಿ 655; ಭಾರತ ಒಕ್ಕೂಟ ಮತ್ತು ಇತರರು –ವಿರುದ್ಧ– ಎಮ್. ಭಾಸ್ಕರನ್ (1995) ಪೂರಕ 4 ಎಸ್‌ಸಿಸಿ 100; ಉಪಾಧ್ಯಕ್ಷ, ಕೇಂದ್ರೀಯ ವಿದ್ಯಾಲಯ ಸಂಘಟನೆ ಮತ್ತು ಇನ್ನೊಬ್ಬರು –ವಿರುದ್ಧ– ಗಿರ್‌ಧಾರಿ ಲಾಲ್ ಯಾದವ್, (2004)

6 ಎಸ್‌ಸಿಸಿ 325; ಮಹಾರಾಷ್ಟ್ರ ರಾಜ್ಯ –ವಿರುದ್ಧ– ರವಿಪ್ರಕಾಶ್ ಬಬೂಲ್‌ಸಿಂಗ್ ಪರ್ಮಾರ್, (2007) 1 ಎಸ್‌ಸಿಸಿ 80; ಹಿಮಾದ್ರಿ ಕೆಮಿಕಲ್ಸ್ ಇಂಡಸ್ಟ್ರೀಸ್ ಲಿಮಿಟೆಡ್ –ವಿರುದ್ಧ– ಕೋಲ್ ಟಾರ್ ಸಂಸ್ಕರಣಾ ಕಂಪನಿ, ಎಐಆರ್ 2007 ಎಸ್‌ಸಿ 2798; ಮತ್ತು ಮೊಹಮ್ಮದ್ ಇಬ್ರಾಹಿಂ & ಇತರರು –ವಿರುದ್ಧ– ಬಿಹಾರ್ ರಾಜ್ಯ ಮತ್ತು ಇತರರು, (2009) 8 ಎಸ್‌ಸಿಸಿ 751)].

7. ಆದುದರಿಂದ, ಸದರಿ ವ್ಯಕ್ತಿಯು, ಮೋಸವನ್ನು ಮಾಡಿ ನೇಮಕಾತಿಯ ಪ್ರಯೋಜನವನ್ನು ಪಡೆದಿರುವುದರಿಂದ ಮತ್ತು ತನ್ನ ನೆರವನ್ನು ನೀಡಿ, ಅವಧಿ ವಿಸ್ತರಿಸಿದಷ್ಟರಮಟ್ಟಿಗೆ ಮಾತ್ರ ಆ ನೇಮಕಾತಿಯ ಪ್ರಯೋಜನವನ್ನು ಉಳಿಸಿಕೊಳ್ಳುವಲ್ಲಿ ಆತನಿಗೆ ನ್ಯಾಯಾಲಯವು ಸಹಾಯ ಮಾಡಿರುವುದರಿಂದ, ಕಾನೂನುಬಾಹಿರವಾಗಿ ಪಡೆದ ನೇಮಕಾತಿಯಿಂದ ದೊರಕುವ ಪಿಂಚಣಿಯಂಥ ಹೆಚ್ಚಿನ ಪ್ರಯೋಜನಗಳನ್ನು ಪಡೆಯಲು ಆತನು ಹಕ್ಕುಳ್ಳವನಾಗಿರುವುದಿಲ್ಲ. ವಿಷಯಕ್ಕೆ ಸಂಬಂಧಿಸಿದಂತೆ ಈ ಅಭಿಪ್ರಾಯದ ಹಿನ್ನಲೆಯಲ್ಲಿ, ಈ ಅರ್ಜಿಗೆ ಅನುಮತಿ ನೀಡಲು ನನಗೆ ಯಾವುದೇ ಕಾರಣವು ಕಂಡುಬರುತ್ತಿಲ್ಲ.

ತದನುಸಾರ, ಅರ್ಜಿಯು ವೆಚ್ಚ ಸಹಿತವಾಗಿ ವಜಾಗೊಳ್ಳುತ್ತದೆ.